## ಹೆಚ್ಚುವರಿ ಸಿಜೆ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

**ಸಿ.ಸಿ.ನಂ.986/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಹನುಮಂತಪ್ಪ | ಪಿ.ಡಬ್ಲ್ಯೂ-1 |
| ತಂದೆಯ ಹೆಸರು | ಃ | ಯಮುನಪ್ಪ | ಸಿ.ಡಬ್ಲ್ಯೂ-2 |
| ವಯಸ್ಸು | ಃ | 29 ವರ್ಷ | |
| ಉದ್ಯೋಗ | ಃ | ಪ್ರೌಢ ಶಾಲಾ ಶಿಕ್ಷಕ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 06.09.2017 |
| ವಾಸಸ್ಥಳ | ಃ | ಹುಣಸೂರು | |

ಮುಖ್ಯ ವಿಚಾರಣೆ ಃ ಎಪಿಪಿ ರವರಿಂದಃ

ನಾನು ಎಡೆಯಾಲ ಹುಲಿ ಯೋಜನಾ ಅರಣ್ಯ ಪ್ರದೇಶದಲ್ಲಿ 2010 ರಿಂದ 2013ರವರೆಗೆ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ25-8-2012ರಂದು ಚಾಸ ಃ 1,3,7 ಮತ್ತು ಮಹದೇವಪ್ಪರವರು ಅರಳಹಳ್ಳಿ ಗೇಟ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸುಮಾರು ಬೆಃ11 ಗಂಟೆ ಸಮಯದಲ್ಲಿ ಸುಮಾರು 30 ಜನ ಈ ಪ್ರಕರಣದ ಆರೋಪಿಗಳು ದನಗಳನ್ನು ಅರಣ್ಯದ ಒಳಗಡೆ ಮೇಯಿಸುವ ಸಲುವಾಗಿ ಬಂದು ನಾವು ಈ ರೀತಿ ದನಗಳನ್ನು ಅರಣ್ಯದ ಒಳಗಡೆ ಮೇಯಿಸಲು ತಡೆ ಒಡ್ಡಿದಾಗ ಅವರು ಗೇಟನ್ನು ತಳ್ಳಿ ದನಕರುಗಳನ್ನು ಅರಣ್ಯದ ಒಳಗಡೆ ಮೇಯಿಸಲು ಬಿಟ್ಟಿರುತ್ತಾರೆ. ಈ ರೀತಿ ಆರೋಪಗಳು ಮತ್ತು ನಾವು ಗೇಟನ್ನು ತಳ್ಳಾಡುವ ಸಮಯದಲ್ಲಿ ಗೇಟಿನ ಒಂದು ಸರಳು ಚಾಸ ಃ 1ರವರ ಕೈಗೆ ಚುಚ್ಚಿಕೊಂಡಿರುತ್ತದೆ. ನನಗೂ ಸಹ ಕೈಗೆ ತರಚಿದ ಗಾಯವಾಗಿರುತ್ತದೆ. ಆ ಸಂದರ್ಭದಲ್ಲಿ ದನಕರುಗಳನ್ನು ಮೇಲಾಧಿಕಾರಿಗಳು ಬರುವತನಕ ಅರಣ್ಯದ ಒಳಗಡೆ ಬಿಡಬೇಡಿ ಎಂದು ಅವರು ಬಂದ ಮೇಲೆ ಸಮಸ್ಯೆ ಬರೆಹರಿಸಿಕೊಳ್ಳಿ ಎಂದು ತಿಳಿಸಿರುತ್ತೇವೆ. ಆಗ ಆರೋಪಿಗಳು ನಮ್ಮನ್ನು ಉದ್ದೇಶಿಸಿ ಏನೋ ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ರೀತಿ ಮಾಡಿರುವುದರಿಂದ ನಮ್ಮ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ಈ ರೀತಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆಸಾಮಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಗಳು ಗೈರು ಹಾಜರಾಗಿರುತ್ತಾರೆ. ( ಈ ಸಂದರ್ಭದಲ್ಲಿ ಆರೋಪಿಗಳ ಪರ ಶ್ರೀಃಪಿಎನ್‌ಜಿಃ ವಕೀಲರು ಆರೋಪಿಗಳ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.)

ನಂತರ ನಾವು ಈ ವಿಚಾರವಾಗಿ ಎಡಿಯಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ಸರಗೂರು ಪೋಲೀಸ್ ಠಾಣೆಗೆ ತೆರಳಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿಜೆ ಮತ್ತು ಜೆ.ಎಂ.ಎಫ್.ಸಿ,
ಹೆಚ್.ಡಿ.ಕೋಟೆ.